VIJAYAKUMAR KANNUR
Digitally signed by VIJAYAKUMAR KANNUR
Date: 2025.12.09 10:21:55 +0530



**ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ**

**ಸಾಕ್ಷಿಗೆ ಇಂದು ದಿನಾಂಕ 06.12.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಲ್ ಎನ್ ಎಸ್ ವಕೀಲರಿಂದ :**

ಆರೋಪಿ ನಮ್ಮ ಬ್ಯಾಂಕಿನಿಂದ ಸಾಲ ಪಡೆದುಕೊಂಡ ನಂತರ ಅದು ಮರುಸಂದಾಯ ಮಾಡದೇ ಇರುವುದರಿಂದ ಯಾವ ದಿನಾಂಕದಂದು ಆತ ಕಟಬಾಕಿದಾರನಾಗಿರುವನು ಎಂದು ನನಗೆ ನಿರ್ದಿಷ್ಟವಾಗಿ ಹೇಳಲು ಬರುವುದಿಲ್ಲ. ಆರೋಪಿ ಎಷ್ಟು ವರ್ಷಗಳ ಹಿಂದೆ ನಮ್ಮ ಬ್ಯಾಂಕಿಗೆ ಕಟಬಾಕಿದಾರನಾಗಿರುವನು ಎಂದು ನನಗೆ ಹೇಳಲು ಬರುವುದಿಲ್ಲ. ಬ್ಯಾಂಕಿನ ಸಾಲ ಮರು ಸಂದಾಯ ಮಾಡದೇ ಇದ್ದಾಗ ಸಾಲದ ಹಣ ತುಂಬುವಂತೆ ಹೇಳಿ ನೋಟಿಸು ನೀಡಿರುತ್ತೇವೆ ಎಂದರೆ ಸರಿ. ಸಾಲ ಮರುಸಂದಾಯ ಮಾಡುವಂತೆ ಹೇಳಿ ಸುಮಾರು 2-3 ನೋಟಿಸುಗಳನ್ನು ಆರೋಪಿಗೆ ಸಾಲ ತುಂಬುವಂತೆ ಹೇಳಿ ಕಳುಹಿಸಿಕೊಟ್ಟಿರುತ್ತೇವೆ. ಈ ಸಂಗತಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ನೋಟಿಸು ಕಳುಹಿಸಿಕೊಟ್ಟ ಬಗ್ಗೆ ಮತ್ತು ಆರೋಪಿ ಜಾರಿಯಾದ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ನೋಟಿಸು ಕಳುಹಿಸಿಕೊಟ್ಟ ನಂತರ ಸಾಲದ ಹಣ ಸಂದಾಯ ಮಾಡುವಂತೆ ಹೇಳಿ ಆರೋಪಿಯ ಮನೆಗೆ ನಮ್ಮ ಬ್ಯಾಂಕಿನ ಸಿಬ್ಬಂದಿಗಳು 2-3 ಬಾರಿ ಹೋಗಿರುವರು. ಆರೋಪಿಯ ಮನೆಗೆ ಹೋದ ಬಗ್ಗೆ ದಾಖಲೆಯನ್ನು ನಾವು ಹಾಜರು ಪಡಿಸಿರುವುದಿಲ್ಲ. ಆ ದಾಖಲೆಯನ್ನು ಹಾಜರು ಪಡಿಸಲು ನಮಗೆ ಯಾವುದೇ ತೊಂದರೆ ಇರುವುದಿಲ್ಲ ಎಂದರೆ ಸರಿ. ಬೇಕಾದರೆ ಹಾಜರು ಪಡಿಸುತ್ತೇವೆ.

2. ಆರೋಪಿ ಸಾಲ ಪಡೆದುಕೊಂಡ ನಂತರ ಕೆಲವೊಂದು ಸಾಲದ ಕಂತುಗಳನ್ನು ಮರು ಸಂದಾಯ ಮಾಡಿರುವನು, ಆದರೆ ಎಷ್ಟು ಎಂದು ನನಗೆ ನಿರ್ದಿಷ್ಟವಾಗಿ ಹೇಳಲು ಬರುವುದಿಲ್ಲ. ಆ ದಾಖಲೆಯನ್ನು ಹಾಜರು ಪಡಿಸಲು ನನಗೆ ಯಾವುದೇ ತೊಂದರೆ

ಇರುವುದಿಲ್ಲ ಎಂದರೆ ಸರಿ. ಆರೋಪಿ ಸಾಲದ ಕಂತುಗಳನ್ನು ಸಂದಾಯ ಮಾಡಿದ ಬಗ್ಗೆ ದೂರಿನಲ್ಲಿ ಮತ್ತು ಈ ನೋಟಿಸಿನಲ್ಲಿ ಹೇಳಿ ಬರೆಸಿರುವುದಿಲ್ಲ. ನಮ್ಮ ಶಾಖೆಯಿಂದ ಗ್ರಾಹಕರು ಸಾಲ ಪಡೆದುಕೊಂಡ ಬಗ್ಗೆ ಮಾತ್ರ ಗೊತ್ತಿರುವುದು. ಬೇರೆ ಶಾಖೆಗಳ ಬಗ್ಗೆ ನನಗೆ ಗೊತ್ತಿರುವುದಿಲ್ಲ.

3. ನಿಪಿ 2 ರ ಮೇಲಿನ ಚೆಕ್ ಸಹಿ ಆರೋಪಿಯದಾಗಿರುವುದು. ನಿಪಿ 2 ರ ಮೇಲಿನ ಆರೋಪಿಯ ಸಹಿ ಮತ್ತು ನಿಪಿ 6 ರ ಅಂತೆಯ ಸ್ವೀಕೃತ ಮೇಲಿನ ಸಹಿ ಬೇರೆ ಬೇರೆಯಾಗಿರುವವು ಎಂದರೆ ಸರಿ. ಆರೋಪಿ ನಮ್ಮ ಬ್ಯಾಂಕಿನಿಂದ ರೂ. 9 ಲಕ್ಷಕ್ಕಿಂತ ಹೆಚ್ಚಿನ ಮೊತ್ತವನ್ನು ಸಾಲವಾಗಿ ಪಡೆದುಕೊಂಡಿರುವನು. ಆ ಸಾಲ ಪಡೆಯುವ ಸಮಯದಲ್ಲಿ ಆರೋಪಿಯ ಕಡೆಯಿಂದ ಪಡೆದುಕೊಂಡ ಎಲ್ಲಾ ದಾಖಲೆಗಳನ್ನು ಹಾಜರು ಪಡಿಸಿರುವೆವು. ಆರೋಪಿ ತಾನು ಸಾಲ ಪಡೆದುಕೊಂಡ ನಂತರ ಒಟ್ಟು ರೂ. 9 ಲಕ್ಷ ಹಣ ಮರು ಸಂದಾಯ ಮಾಡಿರುವನು ಎಂದರೆ ಸರಿಯಲ್ಲ. ಬಾಕಿ ಉಳಿದಿರುವ ಸಾಲದ ಹಣವನ್ನು ಸಂದಾಯ ಮಾಡಲು ಆರೋಪಿ ತಯಾರು ಇದ್ದರೂ ಸಹಿತ ನಾವು ಆತನಿಗೆ ಮಾಹಿತಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 2 ರ ಚೆಕ್ ನ್ನು ಆರೋಪಿಯು ಕಾನೂನು ಬದ್ದವಾದ ಋಣ ಸಂದಾಯಕ್ಕಾಗಿ ನೀಡಿರುವಂತ ಚೆಕ್ ಅಗಿರುವುದಿಲ್ಲ, ಆತ ಸಾಲದ ಹಣದ ಭದ್ರತೆಗಾಗಿ ನೀಡಿರುವ ಖುಲ್ಲಾ ಚೆಕ್ ನ್ನು ದುರುಪಯೋಗಪಡಿಸಿರುವ ಈ ಸುಳ್ಳು ದೂರು ದಾಖಲು ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4. ಆರೋಪಿಯ ಹೆಂಡತಿಯ ಹೆಸರಿನಲ್ಲಿ ನಮ್ಮ ಬ್ಯಾಂಕಿನ ಪ್ರಧಾನ ಕಚೇರಿಯಾದ ಬೈಲಹೊಂಗಲ ಶಾಖೆಯಿಂದ ಸಾಲ ಪಡೆದುಕೊಂಡ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಆ ಸಮಯದಲ್ಲಿ ಆರೋಪಿ ಕೆನರಾ ಬ್ಯಾಂಕಿನ ಚೆಕ್ ಗಳನ್ನು ಭದ್ರತೆಗಾಗಿ ನೀಡಿರುವನು ಎಂದರೆ ಸಾಕ್ಷಿ ತನಗೆ ಮಾಹಿತಿ ಇರುವುದಿಲ್ಲ ಎಂದು ಉತ್ತರಿಸುವರು. ಈ ದೂರಿನಲ್ಲಿ ಹೇಳಿರುವಂತೆ ಆರೋಪಿ ಕಾನೂನು ಬದ್ದವಾದ ಋಣ ಸಂದಾಯ ಮಾಡಲು ನಿಪಿ 2 ರ ಚೆಕ್ ನ್ನು ನೀಡದೆ ಇರದ್ದರೂ ಸಹಿತ ಆತ ಭದ್ರತೆಗಾಗಿ ನೀಡಿರುವ ಖುಲ್ಲಾ ಚೆಕ್ ನ್ನು

ದುರುಪಯೋಗಪಡಿಸಿಕೊಂಡು ಈ ಸುಳ್ಳು ದೂರು ದಾಖಲು ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ:** ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ

VIJAYAKUMAR KANNUR

Digitally signed by VIJAYAKUMAR KANNUR
Date: 2025.12.09 10:22:02 +0530